ದಿನಾಂಕ ಃ 12.11.2021 ರಂದು ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು : ಅರ್ಜಿದಾರರ ಪರ ಶ್ರೀ ಎ ಕೆ ಕೆ ವಕೀಲರಿಂದ,

1985 ರಲ್ಲಿ ನನ್ನ ಅಣ್ಣ-ತಮ್ಮಂದಿರ ಮಧ್ಯ ಭಾಗವಾಗುವಾಗ ನನ್ನನ್ನು ಕರೆದಿರುವುದಿಲ್ಲ. ನನ್ನ ತಂದೆಯ ಜೀವಿತ ಕಾಲದಲ್ಲಿ ನಾನು ಪಾಲು ಬೇಕು ಎಂದು ಕೇಳಿದ್ದೇನು. ನನ್ನ ತಂದೆ ಪಾಲು ಕೊಡುತ್ತೇವೆ ಎಂದು ಹೇಳುತ್ತಾ ಬಂದಿದ್ದರು. 1991 ರಲ್ಲಿ ಯಾವೆಲ್ಲಾ ಆಸ್ತಿಗಳಲ್ಲಿ ಪಾಲು ವಿಬಾಗ ಆಗಿರುತ್ತದೆ ಎಂದು ನನಗೆ ಸರ್ವೆ ನಂಬರ್ ಹೇಳಲು ಬರುವುದಿಲ್ಲ. ಪಾಲು ವಿಭಾಗವಾಗುವಾಗ ನನ್ನನ್ನು ಕರೆದಿರುವುದಿಲ್ಲ. ಪಾಲು ವಿಭಾಗದ ಪ್ರಕಾರ ಖಾತಾ ಬದಲಾವಣೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಅಕ್ಕನ ಹೆಸರು ಬಸಮ್ಮ. ನನ್ನ ಅಕ್ಕನ ಗಂಡನ ಹೆಸರು ಹರಿಶ್ವರಪ್ಪ. ಹರಿಶ್ವರಪ್ಪ ಆಂಧ್ರಪ್ರದೇಶದ ನಿಟ್ಟೂರೊಟ್ಟಿ ಗ್ರಾಮದವರು ಮತ್ತು ಅವರ ಮದುವೆ ನಿಟ್ಟೂರೊಟ್ಟಿ ಗ್ರಾಮದಲ್ಲಿ ಆಗಿರುತ್ತದೆ ಎಂದರೆ ಸರಿ. ನನ್ನ ಮದುವೆಯಾಗಿ ಅಂದಾಜು 45 ವರ್ಷ ಆಗಿರಬಹುದು. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲದೆ ಇದ್ದರೂ ಸಹ ನಾನು ಮತ್ತು ನನ್ನ ಅಕ್ಕನ ಮಕ್ಕಳು ಸೇರಿ ಅಸಲು ದಾವೆ 42/2018 ಎಂದು ಸುಳ್ಳು ದಾವೆ ಹಾಕಿರುತ್ತೇವೆ ಎಂದರೆ ಸಾಕ್ಷಿ ಸುಳ್ಳು ದಾವೆ ಹಾಕಿರುವುದಿಲ್ಲ ಎಂದು ಹೇಳುತ್ತಾರೆ. ಅರ್ಜಿದಾರರು ಅಸಲು ದಾವೆ 264/2006 ನ್ನು ಸಲ್ಲಿಸಿದ ವಿಷಯ ನನಗೆ 2006 ನೇ ಇಸ್ವಿಯಲ್ಲಿ ಗೊತ್ತಿತ್ತು ಎಂದರೆ ಸರಿಯಲ್ಲ. ಅರ್ಜಿದಾರರು ಸದರಿ ದಾವೆಯನ್ನು ಹಾಕಿರುತ್ತಾರೆ ಎಂದು ನಿಮಗೆ ಯಾವುದೇ ಗೊತ್ತಾಯಿತು ಎಂದರೆ ಸಾಕ್ಷಿಯೂ ನನಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ನನ್ನ ಅಕ್ಕನ ಕುಟುಂಬ ನಿಟ್ಟೂರೊಟ್ಟಿ ಕುಟುಂಬ ಎಂದರೆ ಸರಿ. ನನ್ನ ಗಂಡ ಕುಟುಂಬದ ಹೆಸರು ಕಾಳಿಂಗೇರ ರವರ ಕುಟುಂಬ. ನಿಟ್ಟೂರೊಟ್ಟಿ ಕುಟುಂಬ ಮತ್ತು ಕಾಳಿಂಗೇರ್ ಕುಟುಂಬದ ಬೇರೆ ಇರುವುದರಿಂದ ಶಿವನಗೌಡ ಕುಟುಂಬದಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 45 ವರ್ಷಗಳ ಹಿಂದೆ ನನಗೆ ಬರಬೇಕಾದ ಬೆಳ್ಳಿ-ಬಂಗಾರವನ್ನು ಕೊಟ್ಟಿರುತ್ತಾರೆ ಆದ ಕಾರಣ ನನಗೆ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲದಿದ್ದರೂ ಸಹ ನನ್ನ ಅಕ್ಕನ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

( ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ,

ಸೀನಿಯರ್ ಸಿವಿಲ್ ನ್ಯಾಯಾಧೀಶರು, ಸಿರುಗುಪ್ಪ.